## ದಿನಾಂಕ:19-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಎಸ್.ವಿ.ಕೆ. ರವರಿಂದಃ-**

**(ಸಾಕ್ಷಿಗೆ ಕನ್ನಡ ಭಾಷೆಯು ಬರದೆ ಇರುವುದರಿಂದ ಮರಾಠಿ ಭಾಷೆಯಲ್ಲಿ ಕೇಳಿದ ಪ್ರಶ್ನೆಗಳನ್ನು ಅರ್ಥೈಸಿಕೊಂಡು ಉಭಯ ಪಕ್ಷಗಾರರ ವಕೀಲರ ಉಪಸ್ಥಿತಿ ಮೇರೆಗೆ ತರ್ಜುಮೆ ಮಾಡಿ ಕನ್ನಡ ಭಾಷೆಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲಾಯಿತು . ಕನ್ನಡ ಭಾಷೆಗೆ ತರ್ಜುಮೆ ಮಾಡಿ ನೀಡಿದ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲು ಉಭಯ ಪಕ್ಷಗಾರರ ಪರ ವಕೀಲರು ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ.)**

ನಾನು 4 ನೇ ತರಗತಿಯವರೆಗೆ ಓದಿದ್ದೇನೆ. 4 ನೇ ಪ್ರತಿವಾದಿಯು 1 ನೇ ತರಗತಿ ಓದಿದ್ದಾರೆ. ನನ್ನ ಮೂಲ ಊರು ಕಲ್ಲೇಹೋಳ. ಕಲ್ಲೇಹೋಳ ರಲ್ಲಿ ದಾವಾ ಸ್ವತ್ತನ್ನು ಹೊರತುಪಡಿಸಿ ಸ್ವಲ್ಪ ಜಮೀನು ಮತ್ತು ಮನೆ ಇದೆ . ನಾನು 2008 ರಲ್ಲಿ ಮೂಲ ಪ್ರತಿವಾದಿ ನಂ.1 ರವರನ್ನು ಭೇಟಿ ಆಗಿದ್ದೆ. ಪ್ರತಿವಾದಿ ನಂ.1 ಜ್ಯೋತಿಬಾ ರವರು ಮತ್ತು ಅವರ ತಂದೆ ರಾವುಜಿ ರವರು ಕಲ್ಲೇಹೋಳದಲ್ಲಿ ವಾಸವಾಗಿದ್ದರು ಎಂದರೆ ಸರಿ . ಜ್ಯೋತಿಬಾ ರವರಿಗೆ ಕಲ್ಲೇಹೊಳದಲ್ಲಿ 2 ಎರಡು ಶೇತ್ಕಿ ಜಮೀನು ಮತ್ತು ಮನೆ ಇವೆ ಎಂದರೆ ಸಾಕ್ಷಿ 2 ಎರಡು ಶೇತ್ಕಿ ಜಮೀನುಗಳ ಬಗ್ಗೆ ನನಗೆ ಗೊತ್ತು , ಮನೆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಜ್ಯೋತಿಬಾ ರವರಿಗೆ 2 ಎರಡು ಶೇತ್ಕಿ ಜಮೀನುಗಳು ಇವೆ ಎಂದು ನನಗೆ 2008 ರಲ್ಲಿ ಗೊತ್ತಾಯಿತು. ಆ ಎರಡು ಜಮೀನುಗಳ ಸರ್ವೆ ನಂಬರ್ ಯಾವುವು ಎಂದು ಚೌಕಾಸಿ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿದ್ದೇನೆ ಎನ್ನುತ್ತಾರೆ. ಚೌಕಾಸಿ ಮಾಡಿದ ನಂತರ ರಾವುಜಿ ರವರ ಮರಣಾನಂತರ ವಾರಸನಾತೆಯಿಂದ ಪ್ರತಿವಾದಿ ನಂ .1 ರವರ ಹೆಸರು ಆ ಜಮೀನುಗಳಲ್ಲಿ ನಮೂದಾಗಿದೆ ಎಂದು ತಿಳಿಯಿತು ಎಂದರೆ ಸರಿ. ಪ್ರತಿವಾದಿ ನಂ.1 ರವರ ಹೆಸರು ವಾರಸನಾತೆಯಿಂದ ನಮೂದಾಗಿದೆ ಎಂದು ತಿಳಿದ ನಂತರ ರಾವುಜಿ

ರವರಿಗೆ ಇತರೆ ವಾರಸುದಾರರು ಇದ್ದ ಬಗ್ಗೆ ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ರಾವುಜಿ ರವರ ಇತರೆ ವಾರಸುದಾರರ ಬಗ್ಗೆ ಚೌಕಾಸಿ ಮಾಡಲು ಅಡಚಣೆ ಇರಲಿಲ್ಲ ಎಂದರೆ ಸಾಕ್ಷಿ ದಾವಾ ಸ್ವತ್ತು ಜ್ಯೋತಿಬಾ ರವರ ಜಮೀನಾಗಿದ್ದರಿಂದ ನಾವು ಚೌಕಾಸಿ ಮಾಡಿಲ್ಲ ಎನ್ನುತ್ತಾರೆ.

**2.** ರಾವುಜಿ ರವರ ಮರಣಾನಂತರ ಜ್ಯೋತಿಬಾ ರವರ ಹೆಸರು ದಾಖಲೆಗಳಲ್ಲಿ ನಮೂದಾಗಿದೆ ಎಂದರೆ ಸರಿ. ಆ ಬಗ್ಗೆ ನಾನು ಸಂಬಂಧಪಟ್ಟ ಡೈರಿ ಮತ್ತು ಕಂದಾಯ ದಾಖಲೆಗಳ ಬಗ್ಗೆ ತಿಳಿದುಕೊಂಡಿದ್ದೇನೆ. ಜ್ಯೋತಿಬಾ ರವರು ಅಪ್ರಾಪ್ತ ವಯಸ್ಕರಾಗಿದ್ದರಿಂದ ಅವರ ಸಂರಕ್ಷಕರಾದ ಅವರ ತಾಯಿ ಯಲ್ಲೂಬಾಯಿ ರವರ ಹೆಸರು ನಮೂದಾಗಿದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ, ಜ್ಯೋತಿಬಾ ರವರ ಹೆಸರು ಮಾತ್ರ ನಮೂದಾಗಿದೆ ಎನ್ನುತ್ತಾರೆ. ರಾವುಜಿ ರವರ ಮರಣಾನಂತರ ಜ್ಯೋತಿಬಾ ರವರ ಹೆಸರು ಯಾವ ಆಧಾರದ ಮೇಲೆ ನಮೂದಾಯಿತು ಎಂದು ನೀವು ವಿಚಾರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಜ್ಯೋತಿಬಾ ರವರು ಪ್ರಾಪ್ತ ವಯಸ್ಕರಾದ ನಂತರ ಅವರ ಹೆಸರು ಮಾತ್ರ ದಾಖಲೆಗಳಲ್ಲಿ ಮುಂದುವರೆಯಿತು ಎಂದರೆ ಸರಿ. ಜ್ಯೋತಿಬಾ ಮತ್ತು ಅವರ ತಾಯಿ ಮಧ್ಯೆ ಯಾವುದೇ ಪಾಲು ವಿಭಾಗವಾಗಿಲ್ಲ ಎಂದರೆ ಸಾಕ್ಷಿ ಆ ಸ್ವತ್ತಿನಲ್ಲಿ ಜ್ಯೋತಿಬಾ ರವರಿಗೆ ಮಾತ್ರ ಹಕ್ಕು ಇತ್ತು ಎನ್ನುತ್ತಾರೆ. ಜ್ಯೋತಿಬಾ ರವರೇ ಸಂಪೂರ್ಣ ಮಾಲೀಕರು ಎಂದು ತೋರಿಸಲು ನೀವು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಪಹಣಿ ಪತ್ರಿಕೆಗಳಲ್ಲಿ ಜ್ಯೋತಿಬಾ ರವರ ಹೆಸರು ಮಾತ್ರ ಬಂದಿದ್ದರಿಂದ ಅವರು ಸಂಪೂರ್ಣ ಮಾಲೀಕರು ಎಂದು ನುಡಿಯುತ್ತಿದ್ದೇನೆ ಎಂದರೆ ಸರಿ. ಪಹಣಿ ಪತ್ರಿಕೆಗಳನ್ನು ಹೊರತುಪಡಿಸಿ ಬೇರೆ

ದಾಖಲೆಗಳನ್ನು ನಾನು ಪರಿಶೀಲಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತು ಜ್ಯೋತಿಬಾ ಮತ್ತು ಅವರ ತಾಯಿ ಯಲ್ಲೂಬಾಯಿ ರವರ ಸಮಾಹಿಕ ಆಸ್ತಿ ಎಂದರೆ ಸರಿಯಲ್ಲ . ಜ್ಯೋತಿಬಾ ರವರು ಮಾತ್ರ ದಾವಾ ಸ್ವತ್ತಿನ ಮಾಲೀಕರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**3.** ಜ್ಯೋತಿಬಾ ರವರ ತಂದೆ ರಾವುಜಿ ರವರನ್ನು ನಾನು ನೋಡಿಲ್ಲ ಎಂದರೆ ಸರಿ. ನಾನು ಜ್ಯೋತಿಬಾ ರವರ ತಾಯಿ ಯಲ್ಲೂಬಾಯಿ ರವರನ್ನು ನೋಡಿಲ್ಲ . ರಾವುಜಿ ಮತ್ತು ಯಲ್ಲೂಬಾಯಿ ರವರಿಗೆ ವಾದಿಯರು ಹೆಣ್ಣು ಮಕ್ಕಳು ಮತ್ತು ಪ್ರತಿವಾದಿ ನಂ .1 ರವರು ಮಗ ಎಂದರೆ ಸರಿ. ಯಲ್ಲೂಬಾಯಿ ರವರನ್ನು ಪಾರ್ವತಿ ಬಾಯಿ ಎಂದೂ ಸಹ ಕರೆಯುತ್ತಿದ್ದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಯಲ್ಲೂಬಾಯಿ ಮತ್ತು ವಾದಿಯರು ಅಸಲು ದಾವಾ ಸಂಖ್ಯೆ 315/2009 ನ್ನು 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ, ಬೆಳಗಾವಿಯಲ್ಲಿ ನನ್ನ ಹೂಡಿದ್ದಾರೆ ಎಂದರೆ ಸಾಕ್ಷಿ 2010 ರಲ್ಲಿ ನಮಗೆ ಆ ದಾವೆಯ ಬಗ್ಗೆ ತಿಳಿಯಿತು ಎನ್ನುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಅಸಲು ದಾವಾ ಸಂಖ್ಯೆ 315/2009 ನ್ನು 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ, ಬೆಳಗಾವಿಯಲ್ಲಿ ಯಲ್ಲೂಬಾಯಿ ಮತ್ತು ವಾದಿಯರು ಹೂಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ದಾವೆಯಲ್ಲಿ ನಾನು ನಮ್ಮ ವಕೀಲರ ಮೂಲಕ ಹಾಜರಾಗಿದ್ದೆ ಎಂದರೆ ಸರಿ. ಆ ದಾವೆಯಲ್ಲಿ ನಾನು ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿ. ಆ ದಾವೆಯಲ್ಲಿ ಪ್ರತಿವಾದಿ ನಂ.1 ಮತ್ತು ಯಲ್ಲೂಬಾಯಿ ರವರಿಗೆ ಸಮಾನ ಹಿಸ್ಸೆ ಇದೆ ಎಂದು ಡಿಕ್ರಿ ಆಯಿತು ಎಂದರೆ ಸರಿಯಲ್ಲ. ಸಾಕ್ಷಿ ಜ್ಯೋತಿಬಾ ರವರು ಮಾತ್ರ ಮಾಲೀಕರು ಎಂದು ಆದೇಶವಾಗಿತ್ತು

ಎನ್ನುತ್ತಾರೆ. ಆ ದಾವೆಯಲ್ಲಿ ಏನು ತೀರ್ಪು ಆಯಿತು ಎಂದು ವಿಚಾರಿಸಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಆ ದಾವೆಯಲ್ಲಿ ನಮ್ಮ ಪರವಾಗಿ ತೀರ್ಪು ಆಗಿದೆ ಎನ್ನುತ್ತಾರೆ. ಆ ದಾವೆಯ ತೀರ್ಪು ಮತ್ತು ಡಿಕ್ರಿಯನ್ನು ನಾನು ಅಪೀಲು ಸಲ್ಲಿಸಿ ಪ್ರಶ್ನಿಸಿಲ್ಲ ಎಂದರೆ ಸರಿ. ಆ ದಾವೆಯಲ್ಲಿ ನನ್ನ ಮತ್ತು ಪ್ರತಿವಾದಿ ನಂ.1 ರವರ ಮಧ್ಯೆ ಆದ ವ್ಯವಹಾರ ಯಲ್ಲೂಬಾಯಿ ರವರಿಗೆ ಬಂದನಕಾರಿಯಲ್ಲ ಎಂದು ಆದೇಶವಾಗಿದೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ಈ ದಾವೆಯ ವಾದಿಯರಿಗೆ ಯಾವುದೇ ಭಾಗ ಕೊಟ್ಟಿಲ್ಲ ಎಂದರೆ ಸರಿ. ಆ ದಾವೆಯ ತೀರ್ಪಿನ ವಿರುದ್ಧ ಈ ದಾವೆಯ ವಾದಿಯರು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆ ದಾವೆಯ ತೀರ್ಪಿನ ವಿರುದ್ಧ ಈ ದಾವೆಯ ವಾದಿಯರು ಮೇಲ್ಮನವಿ ಸಲ್ಲಿಸಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**4.** ಯಲ್ಲೂಬಾಯಿ ರವರು ಸುಮಾರು 7 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಯಲ್ಲೂಬಾಯಿ ರವರ ಮರಣಾನಂತರ ಅವರ ವಾರಸುದಾರರುಗಳೆಂದರೆ ವಾದಿಯರು ಮತ್ತು 1ನೇ ಪ್ರತಿವಾದಿ ಎಂದರೆ ಸರಿ. ಆ ದಾವೆಯ ತೀರ್ಪಿನ ನಂತರ ಯಲ್ಲೂಬಾಯಿ ರವರು ಯಾವುದೇ ಹಕ್ಕು ಬಿಟ್ಟುಕೊಟ್ಟ ಪತ್ರವನ್ನು ಈ ದಾವೆಯ ಪ್ರತಿವಾದಿ ನಂ.3 ಮತ್ತು 4 ರವರಿಗೆ ಬರೆದುಕೊಟ್ಟಿಲ್ಲ ಎಂದರೆ ಸರಿ. ಆ ದಾವೆಯಲ್ಲಿ ಯಲ್ಲೂಬಾಯಿ ರವರಿಗೆ ಅರ್ಧ ಹಿಸ್ಸೆಯನ್ನು ಕೊಟ್ಟಿದ್ದರೂ ಸಹ ನನ್ನ ಪರವಾಗಿಯೇ ಡಿಕ್ರಿಯಾಗಿದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಲ್ಲೂಬಾಯಿ ರವರ ಮರಣಾನಂತರ ವಾದಿಯರು ಈ ದಾವೆಯನ್ನು ಯಾವ ಕಾರಣಕ್ಕಾಗಿ ಹೂಡಿದ್ದಾರೆ ಎಂದರೆ ಸಾಕ್ಷಿ ಪಾಲು ವಿಭಾಗಕ್ಕಾಗಿ ಹೂಡಿದ್ದಾರೆ ಎನ್ನುತ್ತಾರೆ. ಯಲ್ಲೂಬಾಯಿ ರವರ ಹಿಸ್ಸೆಯಲ್ಲಿನ ವಾದಿಯರ

ಹಿಸ್ಸೆಯನ್ನು ಕೊಡಲು ನಿಮ್ಮದು ಯಾವುದೇ ತಕರಾರು ಇಲ್ಲ ಎಂದರೆ ಸಾಕ್ಷಿ ನಾನು ಖರೀದಿಸಿದ ಸ್ವತ್ತಿನಲ್ಲಿ ಕೊಡಲು ಸಿದ್ಧನಿಲ್ಲ ಎನ್ನುತ್ತಾರೆ. ನಾನು ಖರೀದಿಸಿದ ಖರೀದಿ ಪತ್ರಕ್ಕೆ ಯಲ್ಲೂಬಾಯಿ ರವರು ಸಹಿ ಮಾಡಿಲ್ಲ ಎಂದರೆ ಸಾಕ್ಷಿ ಪ್ರತಿವಾದಿ ನಂ .1 ರವರು ಮಾತ್ರ ಮಾಲೀಕರು ಎನ್ನುತ್ತಾರೆ. ಖರೀದಿ ಪತ್ರಕ್ಕೆ ಪ್ರತಿವಾದಿ ನಂ.1 ಜ್ಯೋತಿಬಾ ರವರು ಯಾರ ಸಮಕ್ಷಮ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ ಗಿರೀಶ್ ಕೇಕರೆ ರವರಿಗೆ ಮೊಕ್ತಿಯಾರನಾಮೆ ಪತ್ರವನ್ನು ಬರೆದುಕೊಟ್ಟಿದ್ದರು ಎನ್ನುತ್ತಾರೆ. ಆ ಮೊಕ್ತಿಯಾರನಾಮೆ ಪತ್ರಕ್ಕೆ ಯಲ್ಲೂಬಾಯಿ ರವರು ಸಹಿ ಮಾಡಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಮೊಕ್ತಿಯಾರನಾಮೆ ಪತ್ರ ನೊಂದಾಯಿತ ಮೊಕ್ತಿಯಾರನಾಮೆ ಪತ್ರವಾಗಿತ್ತು . ಜ್ಯೋತಿಬಾ ರವರು ಕೇಕರೆ ರವರಿಗೆ ಬರೆದುಕೊಟ್ಟ ನೊಂದಾಯಿತ ಮೊಕ್ತಿಯಾರನಾಮೆ ಪತ್ರದ ದೃಡೀಕೃತ ನಕಲನ್ನು ನಾನು ಉಪ ನೊಂದಣಾಧಿಕಾರಿಗಳ ಕಛೇರಿಯಿಂದ ಪಡೆದಿರುತ್ತೇನೆ.

**5.** 2007 ರಲ್ಲಿ ಜ್ಯೋತಿಬಾ ರವರು ಕೇಕರೆ ರವರಿಗೆ ನೊಂದಾಯಿತ ಮೊಕ್ತಿಯಾರನಾಮೆ ಪತ್ರವನ್ನು ಬರೆದುಕೊಟ್ಟಿದ್ದರು . ನಾನು ಸದರಿ ನೊಂದಾಯಿತ ಮೊಕ್ತಿಯಾರನಾಮೆ ಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ . ನೊಂದಾಯಿತ ಮೊಕ್ತಿಯಾರನಾಮೆ ಪತ್ರದ ಮೂಲ ಪ್ರತಿ ಯಾರ ಕಬ್ಜೆಯಲ್ಲಿದೆ ಎಂದರೆ ಸಾಕ್ಷಿ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಸದರಿ ನೊಂದಾಯಿತ ಮೊಕ್ತಿಯಾರನಾಮೆ ಪತ್ರವನ್ನು ಕೇಕರೆ ರವರು ನನಗೆ 2008 ರಲ್ಲಿ ಕೊಟ್ಟಿರುತ್ತಾರೆ. ಸದರಿ ನೊಂದಾಯಿತ ಮೊಕ್ತಿಯಾರನಾಮೆ ಪತ್ರದಲ್ಲಿ ಬರೆದ ಅಂಶಗಳ ಬಗ್ಗೆ ಮತ್ತು ಷರತ್ತುಗಳ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ನಾನು ಓದಿ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ.

ಸದರಿ ನೊಂದಾಯಿತ ಮೊಕ್ತಿಯಾರನಾಮೆ ಪತ್ರ ಬರೆದುಕೊಡುವ ಸಮಯದಲ್ಲಿ ಜ್ಯೋತಿಬಾ ಮತ್ತು ಕೇಕರೆ ರವರ ಮಧ್ಯೆ ಆದ ಹಣಕಾಸಿನ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇಲ್ಲ . ಇಲ್ಲಿಯವರೆಗೂ ಜ್ಯೋತಿಬಾ ಮತ್ತು ಕೇಕರೆ ರವರ ಮಧ್ಯೆ ಆದ ಹಣಕಾಸಿನ ವ್ಯವಹಾರದ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಜ್ಯೋತಿಬಾ ಮತ್ತು ಕೇಕರೆ ರವರ ಮಧ್ಯೆ ನಿಮ್ಮ ಸಮಕ್ಷಮ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿ . ಸದರಿ ನೊಂದಾಯಿತ ಮೊಕ್ತಿಯಾರನಾಮೆ ಪತ್ರವನ್ನು ಎಷ್ಟು ಮುಖಬೆಲೆಯ ಛಾಪಾಕಾಗದದಲ್ಲಿ ಬರೆಯಲಾಗಿದೆ ಎಂದು ನಾನು ಕೇಕರೆಯವರನ್ನು ಕೇಳಿ ತಿಳಿದುಕೊಂಡಿಲ್ಲ ಎಂದರೆ ಸರಿ . ಡಿಸೆಂಬರ್ 2007 ರಲ್ಲಿ ದಾವಾ ಸ್ವತ್ತಿನ ಕಬ್ಜೆ ಯಾರ ಬಳಿ ಇತ್ತು ಎಂದರೆ ಸಾಕ್ಷಿ 2008 ರಿಂದ ನಾವು ಕಬ್ಜೆಯಲ್ಲಿದ್ದೇವೆ ಎನ್ನುತ್ತಾರೆ.

**6.** ರಾವುಜಿ ರವರ ಮರಣಾನಂತರ ಮನೆಯ ವ್ಯವಹಾರವನ್ನು 1 ನೇ ಪ್ರತಿವಾದಿ ಜ್ಯೋತಿಬಾ ರವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಯಲ್ಲೂಬಾಯಿ ಮತ್ತು ಜ್ಯೋತಿಬಾ ರವರು ದಾವಾ ಸ್ವತ್ತಿನ ಸಮಾಹಿಕ ಕಬ್ಜೆಯಲ್ಲಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಜ್ಯೋತಿಬಾ ರವರು ಮಾತ್ರ ಕಬ್ಜೆಯಲ್ಲಿದ್ದರು ಎನ್ನುತ್ತಾರೆ. 2008 ಕ್ಕಿಂತ ಮೊದಲು ಜ್ಯೋತಿಬಾ ಮತ್ತು ಅವರ ತಾಯಿ ಯಾವ ರೀತಿಯ ಕಬ್ಜೆ ಯಲ್ಲಿದ್ದರು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ . ಜ್ಯೋತಿಬಾ ರವರು ಕೇಕರೆ ರವರಿಗೆ ದಾವಾ ಸ್ವತ್ತಿನ ಕಬ್ಜಾ ಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ , ಸಾಕ್ಷಿ ನನಗೆ ಕೇವಲ ಮೊಕ್ತಿಯಾರನಾಮೆ ಪತ್ರವನ್ನು ತೋರಿಸಿದ್ದಾರೆ ಎನ್ನುತ್ತಾರೆ. ಜ್ಯೋತಿಬಾ ರವರು ಕೇಕರೆ ರವರಿಗೆ ಬರೆದುಕೊಟ್ಟ ಮೊಕ್ತಿಯಾರನಾಮೆ ಪತ್ರ ಕೇವಲ ದಾವಾ ಸ್ವತ್ತು ಸರ್ವೆ

ನಂ.160/2 ಕ್ಕೆ ಮಾತ್ರ ಸಂಬಂಧಿಸಿತ್ತು . ಗಿರೀಶ್ ಕೇಕರೆ ರವರು ರಿಯಲ್ ಎಸ್ಟೇಟ್ ಏಜೆಂಟ್ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಗಿರೀಶ್ ಕೇಕರೆ ರವರ ತಂದೆ ಬಾಲಕೃಷ್ಣ ಕೇಕರೆ ರವರು ಪ್ರಸಿದ್ಧ ಬಾಂಡ್ ಬರಹಗಾರರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಬಾಲಕೃಷ್ಣ ರವರ ಮರಣಾನಂತರ ಅವರ ಮಗ ಗಿರೀಶ್ ಕೇಕರೆ ರವರು ಬಾಂಡ್ ಪತ್ರ ಬರೆಯುತ್ತಾರೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಗಿರೀಶ್ ಕೇಕರೆ ರವರು ಎಲ್ಲಿ ಇರುತ್ತಾರೆ ಮತ್ತು ಏನು ಕೆಲಸ ಮಾಡುತ್ತಾರೆ ಮತ್ತು ಏನು ವ್ಯವಹಾರ ಮಾಡುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ನಾನು ಮತ್ತು ಗಿರೀಶ್ ಕೇಕರೆ ರವರು ಕೂಡಿ ಮೊಕ್ತಿಯಾರನಾಮೆ ಪತ್ರವನ್ನು ಸೃಷ್ಟಿಸಿ ನಂತರ ಖರೀದಿ ಪತ್ರ ನನ್ನ ಪರವಾಗಿ ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಮೊಕ್ತಿಯಾರನಾಮೆ ಪತ್ರವನ್ನು ಯಾರು ಬರೆದರು ಮತ್ತು ಅದರಲ್ಲಿ ಏನು ಷರತ್ತುಗಳಿವೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಅದನ್ನು ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಲಾಗಿದೆ ಎನ್ನುತ್ತಾರೆ.

**7.** ತಾನಪ್ಪ ಈಶ್ವರ್ ಪಾಟೀಲ್ ರವರು ಯಾವ ಊರಿನವರು ಮತ್ತು ಅವರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ . ಮೊಕ್ತಿಯಾರನಾಮೆ ಪತ್ರವನ್ನು ಹಾಜರುಪಡಿಸುವ ಸಮಯದಲ್ಲಿ ತಾನಪ್ಪ ಈಶ್ವರ್ ಪಾಟೀಲ್ ರವರು ಯಾರು ಎಂದು ಚೌಕಾಸಿ ಮಾಡಿಲ್ಲ ಎಂದರೆ ಸರಿ. ವಿ.ಆರ್.ಕಾಟೆ ವಕೀಲರು ಮತ್ತು ನೋಟರಿ ರವರು ಯಾರು ಎಂದು ನೀವು ಚೌಕಾಸಿ ಮಾಡಿಲ್ಲ ಎಂದರೆ ಸಾಕ್ಷಿ ನಾವು ಅವರ ಸಮಕ್ಷಮ ಸಹಿ ಮಾಡಿದ್ದೇವೆ ಎನ್ನುತ್ತಾರೆ. ಮೊಕ್ತಿಯಾರನಾಮೆ ಪತ್ರಕ್ಕೆ ನಾನು ಮತ್ತು ನನ್ನ ಸಹೋದರ ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇವೆ. ಮೊಕ್ತಿಯಾರನಾಮೆ ಪತ್ರ ಬರೆಯಲು ಯಾರು ಮಾಹಿತಿ ನೀಡಿದ್ದಾರೆ

ಎಂದರೆ ಸಾಕ್ಷಿ ಜ್ಯೋತಿಬಾ ರವರು ಕೇಕರೆ ರವರಿಗೆ ಮಾಹಿತಿ ನೀಡಿದ್ದಾರೆ ಎನ್ನುತ್ತಾರೆ. ಮೊಕ್ತಿಯಾರನಾಮೆ ಪತ್ರ ಬರೆದುಕೊಡುವ ಸಮಯದಲ್ಲಿ ನಾನು ಮತ್ತು ನನ್ನ ಸಹೋದರ ಹಾಜರಿದ್ದೆವು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜ್ಯೋತಿಬಾ ಮತ್ತು ಕೇಕರೆ ಮತ್ತು ಸುಳ್ಳು ಮೊಕ್ತಿಯಾರನಾಮೆ ಪತ್ರವನ್ನು ಸೃಷ್ಟಿಸಿದ್ದಾರೆ , ಅದರ ಆಧಾರದ ಮೇಲೆ ನಾವು ಖರೀದಿ ಪತ್ರ ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಜ್ಯೋತಿಬಾ ರವರು ಕೇಕರೆ ರವರಿಗೆ ಯಾವುದೇ ಮೊಕ್ತಿಯಾರನಾಮೆ ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

**8.** ಖರೀದಿ ಪತ್ರ ಬರೆಸಿಕೊಳ್ಳುವ ಮೊದಲು ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿದ್ದೀರಾ ಎಂದರೆ ಸಾಕ್ಷಿ ನಾನು ಜ್ಯೋತಿಬಾ ರವರನ್ನು ಕೇಳಿ ಖರೀದಿಸಿದ್ದೇನೆ ಎನ್ನುತ್ತಾರೆ. ಪತ್ರಿಕಾ ಪ್ರಕಟಣೆ ನೀಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ದಾವಾ ಸ್ವತ್ತು ಅವರ ಸ್ವಂತ ಜಮೀನಾಗಿದ್ದರಿಂದ ಪತ್ರಿಕಾ ಪ್ರಕಟಣೆ ತೆಗೆದುಕೊಂಡಿಲ್ಲ ಎನ್ನುತ್ತಾರೆ. ಜ್ಯೋತಿಬಾ ರವರು ಸರ್ವೆ ನಂ.160/2 ನ್ನು ಮಾರಾಟ ಮಾಡುತ್ತಿರುವ ಬಗ್ಗೆ ಅವರ ತಾಯಿ ಯಲ್ಲೂಬಾಯಿ ರವರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸರ್ವೆ ನಂ.160/2 ಯಲ್ಲೂಬಾಯಿ ಮತ್ತು ಜ್ಯೋತಿಬಾ ರವರ ಸಮಾಹಿಕ ಆಸ್ತಿ ಆಗಿದ್ದರಿಂದ ಅವರಿಗೆ ಗೊತ್ತಾಗುತ್ತದೆ ಎಂದು ಪತ್ರಿಕಾ ಪ್ರಕಟಣೆ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರ ಬರೆಸಿಕೊಳ್ಳುವ ಸಮಯದಲ್ಲಿ ಯಾವ ಯಾವ ಕಾಗದ ಪತ್ರಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಡೈರಿ ಉತಾರ ಹಾಗೂ ಪಹಣಿ ಪತ್ರಿಕೆಗಳನ್ನು ನೋಡಿದ್ದೇನೆ ಎನ್ನುತ್ತಾರೆ. ಖರೀದಿ ಪತ್ರ ಬರೆಸಿಕೊಳ್ಳುವ ಮೊದಲು ಖರೀದಿಗೆ ಸಂಬಂಧಿಸಿದಂತೆ ಕರಾರು ಪತ್ರವಾಗಿದೆ. ಜ್ಯೋತಿಬಾ

ರವರು ಸರ್ವೆ ನಂ.160/2 ನ್ನು ಮಾರಾಟ ಮಾಡುವ ಬಗ್ಗೆ ನಿಮಗೆ ಯಾರು ಹೇಳಿದರು ಎಂದರೆ ಸಾಕ್ಷಿ ನಮ್ಮ ಊರಿನವರು ಹೇಳಿದರು ಎನ್ನುತ್ತಾರೆ. ಊರಿನವರು ಹೇಳಿದ ನಂತರ ಜ್ಯೋತಿಬಾ ರವರನ್ನು ಭೇಟಿಯಾಗಿದ್ದೀರಾ ಎಂದರೆ ಸಾಕ್ಷಿ ನಾನು ಭೇಟಿಯಾಗಿದ್ದೆ ಎನ್ನುತ್ತಾರೆ. ಖರೀದಿ ಪತ್ರ ಬರೆಸಿಕೊಳ್ಳುವ 2 ದಿನ ಮೊದಲು ಜ್ಯೋತಿಬಾ ರವರನ್ನು ಭೇಟಿಯಾಗಿದ್ದೆ. ಜ್ಯೋತಿಬಾ ರವರನ್ನು ಸರ್ವೆ ನಂ.160/2 ನ್ನು ಮಾರಾಟ ಮಾಡುವ ಬಗ್ಗೆ ಕೇಳಿದಾಗ ಅವರು ಕೇಕರೆ ರವರಿಗೆ ಮೊಕ್ತಿಯಾರನಾಮೆ ಪತ್ರವನ್ನು ಬರೆದುಕೊಟ್ಟಿರುವುದಾಗಿ ತಿಳಿಸಿದರು ಎನ್ನುತ್ತಾರೆ. ಕೇಕರೆ ರವರು ನನಗೆ ವೈಯಕ್ತಿಕವಾಗಿ ಪರಿಚಯ ಇರಲಿಲ್ಲ, ಖರೀಸುವ ವ್ಯವಹಾರ ಸಲುವಾಗಿ ನಾನು ಅವರನ್ನು ಭೇಟಿಯಾಗಿದ್ದೆ ಎನ್ನುತ್ತಾರೆ. ಮೂಲ ಮಾಲೀಕರೊಂದಿಗೆ ಖರೀದಿ ವ್ಯವಹಾರ ಮಾಡಲು ಅಡಚಣೆ ಇರಲಿಲ್ಲ ಎಂದರೆ ಅವರು 2007 ರಲ್ಲಿ ಮೊಕ್ತಿಯಾರನಾಮೆ ಪತ್ರವನ್ನು ಬರೆದುಕೊಟ್ಟಿದ್ದರು ಎನ್ನುತ್ತಾರೆ. ಕೇಕರೆ ರವರನ್ನು ನಿಮಗೆ ಯಾರು ಪರಿಚಯಿಸಿದರು ಎಂದರೆ ಸಾಕ್ಷಿ ಊರಿನ ಜನ ಬಂದಿದ್ದರು, ಹಾಗೆ ಪರಿಚಯವಾಯಿತು ಎನ್ನುತ್ತಾರೆ.

**9.** ಜ್ಯೋತಿಬಾ ರವರು ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತಾರೆ. ಖರೀದಿ ಪತ್ರದಲ್ಲಿ ಜ್ಯೋತಿಬಾ ರವರು ಇಂಗ್ಲೀಷ್ ನಲ್ಲಿ ಸಹಿ ಮಾಡಿದ್ದಾರೆ . ಖರೀದಿ ಪತ್ರ ಬರೆಯಲು ಮಾಹಿತಿಯನ್ನು ಗಿರೀಶ್ ಕೇಕರೆ ರವರು ನೀಡಿದ್ದಾರೆ. ಖರೀದಿ ಪತ್ರ ಬರೆಯಲು ಎಷ್ಟು ಮುಖಬೆಲೆಯ ಬಾಂಡ್ ಖರೀದಿಸಿದ್ದರು ಎಂದು ನನಗೆ ನೆನಪಿಲ್ಲ. ಗಿರೀಶ್ ಕೇಕರೆ ರವರು ಪತ್ರ ಬರಹಗಾರರಿಗೆ ಏನೇನು ಮಾಹಿತಿ ನೀಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಖರೀದಿ ಪತ್ರ ಬರೆಸಿಕೊಳ್ಳಲು ನಾನು, ನನ್ನ ಸಹೋದರ ಮತ್ತು ನನ್ನ ತಂದೆ ಹೋಗಿದ್ದೆವು.

ಆ ದಿನ ನಾವು 3 ಜನ ಹೊರತುಪಡಿಸಿ ನಮ್ಮ ಪರವಾಗಿ ಯಾರೂ ವಕೀಲರು ಬಂದಿರುವುದಿಲ್ಲ. ಖರೀದಿ ಪತ್ರ ಬರೆಸಿಕೊಳ್ಳುವ ಸಮಯದಲ್ಲಿ ಸಾಕ್ಷಿದಾರರಾಗಿ ಯಶವಂತ ಕಲ್ಲಪ್ಪ ಮರೂಚೆ ಮತ್ತು ಯಶವಂತ ಪುನ್ನಪ್ಪ ಕನ್ನೂಕರ್ ರವರು ಹಾಜರಿದ್ದರು . ಇನ್ನೊಬ್ಬರು ನಮ್ಮ ಸಂಬಂಧಿಕರು ಇದ್ದರು, ಈಗ ನೆನಪಿಲ್ಲ ಎನ್ನುತ್ತಾರೆ. ಆ ಮೂವರು ಸಾಕ್ಷಿದಾರರನ್ನು ಮತ್ತು ನಾವು ಮೂವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ . ಖರೀದಿ ಪತ್ರವನ್ನು ಕಾಕಡೆ ಎನ್ನುವರ ಬಳಿ ಶನಿವಾರಕೂಟದಲ್ಲಿ ಮರಾಠಿ ಭಾಷೆಯಲ್ಲಿ ಟೈಪ್ ಮಾಡಿಸಲಾಗಿದೆ. ಟೈಪ್ ಮಾಡಿದವರು ಖರೀದಿ ಪತ್ರಕ್ಕೆ ಸಹಿ ಮಾಡಿದ್ದಾರೆಯೇ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಖರೀದಿ ಪತ್ರವನ್ನು ಟೈಪ್ ಮಾಡಿದ ನಂತರ ಎಲ್ಲರ ಸಹಿಗಳನ್ನು ಉಪ ನೊಂದಣಾಧಿಕಾರಿಗಳ ಕಛೇರಿಯಲ್ಲಿ ತೆಗೆದುಕೊಳ್ಳಲಾಯಿತು.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**